ದಿನಾಂಕಃ 14-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಟಿ ಎನ್ ವಕೀಲರಿಂದ

ನನಗೆ ಎರಡು ಮದುವೆಯಾಗಿರುತ್ತದೆ ಅದರಲ್ಲಿ ದೊಡ್ಡ ಹೆಂಡತಿ ತೀರಿಕೊಂಡಿರುತ್ತಾರೆ. ದೊಡ್ಡ ಹೆಂಡತಿ ಖಾಯಿಲೆಯಿಂದ ಮೃತಪಟ್ಟಿರುತ್ತಾರೆ. ಅವರಿಗೆ ಒಂದು ಹೆಣ್ಣು ಮಗು ಇರುತ್ತದೆ. ಅವರಿಗೆ ಮದುವೆಯಾಗಿ ಅವರ ಗಂಡನ ಮನೆಯಲ್ಲಿ ಇರುತ್ತಾರೆ. ಮೊದಲನೇ ಹೆಂಡತಿ ತೀರಿಹೋಗಿ 15 ವರ್ಷದ ಮೇಲೆ ಆಗಿರುತ್ತದೆ. ಮೊದಲನೇ ಹೆಂಡತಿಯ ತವರೂರು ಶ್ರೀನಿವಾಸಪುರ ತಾಲ್ಲೂಕು ಮಂಚಿನೀಲ್ಲಕೋಟ. ಮೊದಲನೇ ಹೆಂಡತಿ ತೀರಿಕೊಂಡಾಗ ನನ್ನ ಮೇಲೆ ಯಾವುದೇ ದೂರು ದಾಖಲಾಗಿರುವುದಿಲ್ಲ. ನಾನು ಒಟ್ಟು 3 ಆಸ್ತಿಗಳ ಮೇಲೆ ದಾವೆ ಸಲ್ಲಿಸಿರುತ್ತೇನೆ. ಈ ಮೂರು ಆಸ್ತಿಗಳನ್ನು ಬಿಟ್ಟು ಮನೆಗಳು ಇದ್ದು ಅವು ಬೇರೆ ಬೇರೆ ಕಡೆ ಇದ್ದು ಅದರಲ್ಲಿ ನಾವೇ ವಾಸ ಮಾಡುತ್ತಿದ್ದೇವೆ. ಅ ಮೂರು ಸರ್ವೆ ನಂಬರ್ ಗಳು ಬಿಟ್ಟು ನಮ್ಮ ಕುಟುಂಬಕ್ಕೆ ಸಂಬಂದಪಟ್ಟಿದ್ದು ಇರುವುದಿಲ್ಲ.

ರಂಗೇನಹಳ್ಳಿ ಗ್ರಾಮದ ಸರ್ವೆ ನಂ. 57 ವಿಸ್ತೀರ್ಣ 3 ಎಕರೆ 21 ಗುಂಟೆ ಜಮೀನು ತಲಾರಿ ಮುನಿಯಪ್ಪನ ಹೆಸರಿನಲ್ಲಿ ಇದೆ ಎಂದರೆ ಸರಿ. ತಲಾರಿ ಮುನಿಯಪ್ಪ ನನ್ನ ತಂದೆ. ಸರ್ವೆ ನಂ. 41/2 ನಂದನಹೊಸಹಳ್ಳಿ ಗ್ರಾದಲ್ಲಿ ಮೂರುವರೆ ಗುಂಟೆ ಜಮೀನಿನು ನಿಮ್ಮದೆ ಎಂದರೆ ನಮ್ಮದೆ ಸರ್ಕಾರದಿಂದ ಮಂಜೂರು ಕೊಟ್ಟಿರುತ್ತಾರೆ. ಮುನಿಯಪ್ಪ ಬಿನ್ ಮುನಿಯಪ್ಪ ನಿಮ್ಮ ತಂದೆ ಸರಿ. ಸರ್ವೆ ನಂ. 240 ರಲ್ಲಿ 27 ಗುಂಟೆ ನಂದನಹೊಸಹಳ್ಳಿ ಗ್ರಾಮದಲ್ಲಿ ಇರುವ ಜಮೀನು ನಮ್ಮದೇ. ಸರ್ವೆ ನಂ. 256 ರ 1 ಗುಂಟೆ ನಂದನಹೊಸಹಳ್ಳಿ ಗ್ರಾಮದಲ್ಲಿ ಇರುವ ಜಮೀನು ನಮ್ಮದೇ ಅದು ಮಂಜೂರು ಮಾಡಿರುವ ಜಮೀನು. ನಂದನಹೊಸಹಳ್ಳಿ ಗ್ರಾಮದ ಸರ್ವೆ ನಂ. 246 ಅದರಲ್ಲಿ ಎಲ್ಲಾಗಿಗೂ ಭಾಗ ಇರುತ್ತದೆ. ನಿಮ್ಮ ತಾತ ಮತ್ತು ಅಪ್ಪನ ಕಾಲದಲ್ಲಿ ವಾಸ ಮಾಡಿದ ಮನೆಗಳು ಇದ್ದವು ಎಂದರೆ ಸರಿ. ಈ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿರುತ್ತೀರ ಎಂದರೆ ಸೇರಿಸಿರುತ್ತೇನೆ.

2007 ರಲ್ಲಿ ನಿಮ್ಮ ದೊಡ್ಡ ಹೆಂಡತಿಯನ್ನು ನೀವು ಬೆಂಕಿ ಹಾಕಿ ಸುಟ್ಟು ಹಾಕಿರುತ್ತೀರಿ ಎಂದರೆ ಸುಳ್ಳು ನಿಮ್ಮ ವಿರುದ್ದ ಕಾಡುಗೋಡೆ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುತ್ತದೆ ಎಂದರೆ ಸುಳ್ಳು ಆಗ ನೀವು ಜೈಲಿಗೆ ಹೋಗಿರುತ್ತೀರಿ ಎಂದರೆ ಸುಳ್ಳು ಅಗ ನಿಮ್ಮ ಬಳಿ ದುಡ್ಡು ಇರಲಿಲ್ಲ ಎಂದರೆ ಸುಳ್ಳು ಸರ್ವೆ ನಂ. 167 ಜಮೀನನ್ನು ನಿಮ್ಮ ಖರ್ಚಿಗಾಗಿ 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಸುಳ್ಳು 5 ನೇ ಪ್ರತಿವಾದಿ ಕೂಡ ನಿಮ್ಮ ಕುಟುಂಬದ ಒಬ್ಬ ಸಧಸ್ಯನಾಗಿದ್ದು ವಂಶ ವೃಕ್ಷ ಕೊಡದೆ ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ಗೊತ್ತಿದ್ದರೂ ಕೂಡ 5 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅದಕ್ಕಾಗಿ ಮನೆಗಳನ್ನು ನೀವು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.